



## ದೇವನೇ ಬಲ್ಲ ಈರುಳ್ಳಿ ಬೆಲೆಯ

ದಿಢೀರನೆ ಗಗನಕ್ಕೇರಿದ್ದ ಈರುಳ್ಳಿ ಬೆಲೆಯು ಅಷ್ಟೇ ವೇಗದಲ್ಲಿ ಕುಸಿತಗೊಂಡಿದೆ. ಬೆಲೆ ಕುಸಿತದಿಂದ ರೈತರು ಬಳಸಿದ ಬೀಜ ಮತ್ತು ಗೊಬ್ಬರದ ರಕಂ ಕೂಡ ಮರಳಿ ಬರುತ್ತಿಲ್ಲ. ಬೆಳೆದ ಈರುಳ್ಳಿಯನ್ನು ಪೇಟೆಗೆ ಮಾರಲು ಒಯ್ಯಲಾರದಷ್ಟು ಕಂಗೆಡಿಸಿದ ಬೆಲೆ ಕುಸಿತವು, ಈರುಳ್ಳಿಯನ್ನು ಹೊಲಗಳಲ್ಲೇ ಕೊಳೆಯುವಂತೆ ಮಾಡಿದೆ. ಕೆಲ ರೈತರು ತಮ್ಮ ಹೊಲಗಳ ಬದುವಿನ ಬಳಿ ಈರುಳ್ಳಿಯನ್ನು ಸಣ್ಣ ಸಣ್ಣ ಗುಡ್ಡೆಗಳನ್ನು ಹಾಕಿ, ಅದರ ಮೇಲೊಂದು ಪ್ಲಾಸ್ಟಿಕ್ ಚೀಲವನ್ನು ಹೊದಿಸಿ ಬೆಲೆ ಸಿಗುವ ಸಣ್ಣ ಭರವಸೆಯಲ್ಲಿ ಬದುಕುತ್ತಿದ್ದಾರೆ. ರೈತನ ಈ ಸ್ಥಿತಿಗೆ ನಿಜವಾಗಿಯೂ ಯಾವಾಗ ಬೆಲೆ ಸಿಗುವುದೋ ಆ ದೇವನೇ ಬಲ್ಲ.

–ಪ್ರಕಾಶ ಎಸ್. ಮನ್ನಂಗಿ, ಮೋಟೆಬೆನ್ನೂರು



## ನೂಜೀ ಮನೆಯ ಕಾವೇರಿ ಮಾತೆ

ಪುತ್ತೂರು ತಾಲ್ಲೂಕಿನ ಕಬಕ ಗ್ರಾಮದ ಮನೆಯಲ್ಲಿ ಕಾವೇರಿ ಉದ್ಭವಿಸಿದ್ದಾಳೆ. ಇದಕ್ಕೆ ಕಾರಣ ಆ ಮನೆಯ ಮಾಲೀಕನಿಗಿರುವ ಕಾವೇರಿ ಮೇಲಿನ ಪ್ರೀತಿ. ಸಾಮಾನ್ಯವಾಗಿ ಕಾವೇರಿಯ ಪ್ರತಿಮೆಯನ್ನು ಸರ್ಕಾರಿ ಕಚೇರಿಗಳ ಬಳಿ ಕಾಣಬಹುದೇ ಹೊರತು ಮನೆಗಳಲ್ಲಿ ಅಲ್ಲ. ಆದರೆ ನೂಜೀ ವೇ.ಮೂ. ರಾಮಕೃಷ್ಣ ಭಟ್ ತಮ್ಮ ಹೊಸ ಮನೆಯ ಕೃಷ್ಣ ಮಂಟಪದ ಒಳಭಾಗದಲ್ಲಿ ಪ್ರತಿಮೆಯನ್ನು ಇಟ್ಟು, ಕಾವೇರಿ ಪ್ರೀತಿ ಮೆರೆಯುತ್ತಿದ್ದಾರೆ.

–ಕುಮಾರ್ ಪೆರ್ನಾಜೆ,
ಪುತ್ತೂರು

## ಇದ್ಯಾರಿದು... ಸೈಕಲ್ ಪೈಲಟ್?

ವಿಮಾನದ ಪೈಲಟ್, ಲೋಕೊ ಪೈಲಟ್ ಬಗ್ಗೆ ತಿಳಿದಿರುವ ನಮಗೆ ‘ಸೈಕಲ್ ಪೈಲಟ್’ ಬಗ್ಗೆ ಅಷ್ಟಾಗಿ ಗೊತ್ತಿರುವುದಿಲ್ಲ. ಆಧುನಿಕತೆಯ ಗೋಜಿಗೆ ಹೋಗದೆ ಎಲ್ಲರಿಂದಲೂ ಸೈಕಲ್ ಪೈಲಟ್ ಎಂದು ಕರೆಯಿಸಿಕೊಳ್ಳುವ ಈ ವ್ಯಕ್ತಿ ಹೆಸರು ನಾರಾಯಣ ಬುದ್ದು ಆಗೇರ. ಬುದ್ದು ನಾರಾಯಣ ಎಂದೇ ಜನಪ್ರಿಯಗೊಂಡಿರುವ ಇವರಿಗೆ ಸದ್ಯ 73ರ ಹರೆಯ. 63 ವರ್ಷಗಳಿಂದ ಸೈಕಲ್ ಇಲ್ಲದೆ ಇವರನ್ನು ಕಂಡ ಉದಾಹರಣೆಯೇ ಇಲ್ಲ ಎನ್ನುವುದು ಸ್ಥಳೀಯರ ಮಾತು.

ಹತ್ತನೇ ವಯಸ್ಸಿಂದ ಇಂದಿನವರೆಗೆ ಸೈಕಲ್ ಮೇಲೆ ಪ್ರಯಾಣಿಸುತ್ತಿರುವ ಇವರು ಸ್ಥಳೀಯ ಜನರಿಗೆ ಸೈಕಲ್ ಪೈಲಟ್ ಎಂದೇ ಪರಿಚಿತ. ಕೆಲಸಕ್ಕೆ ಹೋಗುವಾಗ, ಹುಲ್ಲು ತರುವಾಗ, ಉರುವಲು ತರುವಾಗ, ಯಕ್ಷಗಾನಕ್ಕೆ ತೆರಳುವಾಗ ಅಷ್ಟೇ ಯಾಕೆ, ಮನೆಯಿಂದ ಹೊರಬಿದ್ದಾಗಲೆಲ್ಲ ಇವರಿಗೆ ಸೈಕಲ್ ಬೇಕೇಬೇಕು. ಮಂಡಲ ಪಂಚಾಯತ್ ಸದಸ್ಯರಾಗಿ, ವ್ಯವಸಾಯ ಸಂಘದಲ್ಲಿ ಇಪ್ಪತ್ತು ವರ್ಷ ಸದಸ್ಯರಾಗಿ ಸೇವೆ ಸಲ್ಲಿಸಿದ ಇವರು ಊರಿನವರ ಪಾಲಿಗೆ ಪ್ರೀತಿಯ ಬುದ್ದು ನಾರಾಯಣ, ಸೈಕಲ್ ಪೈಲಟ್. ಹೀಗೆ ಮಾತಿಗೆ ಸಿಕ್ಕ ಅವರು, ‘ಸೈಕಲ್ ಇಲ್ಲದೆ ಹೊರ ಹೋಗಲು ನನಗೆ ಮನಸ್ಸೇ ಬರುವುದಿಲ್ಲ’ ಎನ್ನುತ್ತಾರೆ. ದಸರೆ, ಹೊಸ್ತು, ದೀಪಾವಳಿ ಮೊದಲಾದ ಹಬ್ಬಗಳಲ್ಲಿ ತಪ್ಪದೇ ಸೈಕಲ್ಲಿಗೆ ಪೂಜೆ ಸಲ್ಲಿಸುವ ಈ ಸೈಕಲ್ ಪೈಲಟ್‌ನ ಸವಾರಿ ಸೆಂಚುರಿ ಬಾರಿಸಲಿ ಎಂಬುದೇ ಮೊಗಟೆಗರ ಹಾರೈಕೆ.

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ

